ನೆಲಮಂಗಲ ಯೋಜನಾ ಪ್ರಾಧಿಕಾರ

ದೂರವಾಣಿ : 96630 46622 | Email : nelamangaka.pa@gmail.com

2ನೇ ಮುಖ್ಯ ರಸ್ತೆ, ಸದಾಶಿವನಗರ, ನೆಲಮಂಗಲ–562 123, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಖ್ಯೆ:ನೆಯೋಪ್ರಾ:LAO:123:2025–2026 ದಿನಾಂಕ: 28 JUL 2026

"ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2–A) ರಡಿಯಲ್ಲಿ)

ವಿಷಯ: ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಗೋರಿನಬೆಲೆ ಗ್ರಾಮದ ಸ.ನಂ. 126/2 ರಲ್ಲಿ 02ಎಕರೆ–35ಗುಂಟೆ ಮತ್ತು ಸ.ನಂ.126/3 ರಲ್ಲಿ 06ಎಕರೆ–06 ಗುಂಟೆ, ಸ.ನಂ.126/1ಎ ರಲ್ಲಿ 07ಎಕರೆ–31ಗುಂಟೆ ಮತ್ತು ಮಂಟನಕುರ್ಚಿ ಗ್ರಾಮದ ಸ.ನಂ.162/2 ರಲ್ಲಿ 3ಎಕರೆ–00ಗುಂಟೆ ಮತ್ತು ಸ.ನಂ.162/3 ರಲ್ಲಿ 03ಎಕರೆ–05 ಗುಂಟೆ **ಒಟ್ಟು 22 ಎಕರೆ 37ಗುಂಟೆ** ವಿಸ್ತೀರ್ಣದ ಪ್ರದೇಶಗಳಿಗೆ **ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಗೆ** ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ. (**"Demarcation & Development" purpose only**)

ಉಲ್ಲೇಖ:
1. **ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧಿಕೃತ ಜ್ಞಾಪನ ಅರ್ಜಿ ಸಂಖ್ಯೆ:** 820492, 820494 ಮತ್ತು 820495 ದಿನಾಂಕ:02–02–2026.
2. ಅರ್ಜಿದಾರರ ಮನವಿ ದಿನಾಂಕ:23–02–2026.
3. **ಮಹಾನಗರ ಯೋಜಕರು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ,** ಬೆಂಗಳೂರು ರವರ ಪೂರ್ವಸಮ್ಮತಿ ದಿನಾಂಕ:26–05–2025.
4. ದಿನಾಂಕ:09–07–2026 ರಂದು ನಡೆದ ಪ್ರಾಧಿಕಾರದ 128 ನೇ ಸಭೆಯ ವಿಷಯ ಸಂಖ್ಯೆ:128:8.8 ರ ನಿರ್ಣಯ.
5. ಈ ಕಛೇರಿ ಶುಲ್ಕ ಪಾವತಿ ತಿಳುವಳಿಕೆ ಪತ್ರ ಸಂಖ್ಯೆ:ನೆಯೋಪ್ರಾ:ಎಲ್ಎಓ:123:2025–26, ದಿನಾಂಕ:15–07–2026.
6. ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿಕೊಳ್ಳಲಾದ ರಶೀದಿ ಸಂಖ್ಯೆ:13227, ದಿನಾಂಕ:18–07–2026. ರೂ.51,95,500–00.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯ ಶಾಇ/24/ಶಾಸನ/2015, ದಿನಾಂಕ:10–09–2015 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ/26/ಶಾಸನ/2021, ದಿನಾಂಕ:05–07–2021.

****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರದಲ್ಲಿ ಪ್ರಸ್ತಾವಿತ ಪ್ರದೇಶವನ್ನು **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿ ಆದೇಶಿಸಿರುತ್ತಾರೆ. ಅದರಂತೆ, ಉಲ್ಲೇಖ (2) ರಲ್ಲಿ ಅರ್ಜಿದಾರರು ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಗೋರಿನಬೆಲೆ ಗ್ರಾಮದ ಸ.ನಂ.126/2 ರಲ್ಲಿ 02ಎಕರೆ–35ಗುಂಟೆ ಮತ್ತು

ಸ.ನಂ.126/3 ರಲ್ಲಿ 05ಎಕರೆ–06 ಗುಂಟೆ, ಸ.ನಂ.126/1ಎ ರಲ್ಲಿ 07ಎಕರೆ–31ಗುಂಟೆ ಮತ್ತು ಮಂಟನಕುರ್ಚಿ ಗ್ರಾಮದ ಸ.ನಂ.162/2 ರಲ್ಲಿ 3ಎಕರೆ–00ಗುಂಟೆ ಮತ್ತು ಸ.ನಂ.162/3 ರಲ್ಲಿ 03ಎಕರೆ–05 ಗುಂಟೆ **ಒಟ್ಟು 22 ಎಕರೆ 37ಗುಂಟೆ** ವಿಸ್ತೀರ್ಣದ ಪ್ರದೇಶಗಳಿಗೆ **ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ** ಅನುಮೋದನೆ ನೀಡಲು ಕೋರಿರುತ್ತಾರೆ. ಆದ್ದರಿಂದ, ಮಾನ್ಯ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರ ಪತ್ರ ದಿನಾಂಕ:06–02–2024 ರ ಸೂಚನೆಯಂತೆ ಸದರಿ ಪ್ರಸ್ತಾವನೆಗೆ **ಮಾನ್ಯ ಮಹಾನಗರ ಯೋಜಕರಿಂದ** ಪೂರ್ವಾನುಮತಿ ಪಡೆದು ವಿಷಯವನ್ನು ಮುಂದಿನ ನೆಲಮಂಗಲ ಯೋಜನಾ ಪ್ರಾಧಿಕಾರದ ಸಭೆಗೆ ಮಂಡಿಸಬೇಕಾಗಿರುತ್ತದೆ. ಆದ್ದರಿಂದ, ಕಡತವನ್ನು ಮಾನ್ಯ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಅದರಂತೆ, ಉಲ್ಲೇಖ (3) ರಲ್ಲಿ ಮಾನ್ಯ ಮಹಾನಗರ ಯೋಜಕರು ಬಿ.ಎಂ.ಆರ್.ಡಿ.ಎ. ರವರು ಪ್ರಶ್ನಿತ ಪ್ರದೇಶಗಳಿಗೆ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಪೂರ್ವಸಮ್ಮತಿ ನೀಡಿರುತ್ತಾರೆ. ಅದರಂತೆ, ವಿಷಯವನ್ನು ಉಲ್ಲೇಖ (4) ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಭೆಯಲ್ಲಿ ಪ್ರಶ್ನಿತ ಪ್ರದೇಶವನ್ನು **ವಸತಿ** ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಅರ್ಜಿದಾರರಿಗೆ ಉಲ್ಲೇಖ (5) ರ ಈ ಕಛೇರಿಯ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಉಲ್ಲೇಖ (6) ರಲ್ಲಿ ನಿಗದಿತ ಶುಲ್ಕಗಳನ್ನು ಪಾವತಿಸಿರುತ್ತಾರೆ ಹಾಗೂ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಮತ್ತು ಉಲ್ಲೇಖ (7) ರ ಸರ್ಕಾರದ ಅಧಿಸೂಚನೆಯಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಗೋರಿನಬೆಲೆ ಗ್ರಾಮದ ಸ.ನಂ.126/2 ರಲ್ಲಿ 02ಎಕರೆ–35ಗುಂಟೆ ಮತ್ತು ಸ.ನಂ.126/3 ರಲ್ಲಿ 06ಎಕರೆ–06 ಗುಂಟೆ, ಸ.ನಂ.126/1ಎ ರಲ್ಲಿ 07ಎಕರೆ–31ಗುಂಟೆ ಮತ್ತು ಮಂಟನಕುರ್ಚಿ ಗ್ರಾಮದ ಸ.ನಂ.162/2 ರಲ್ಲಿ 3ಎಕರೆ–00ಗುಂಟೆ ಮತ್ತು ಸ.ನಂ.162/3 ರಲ್ಲಿ 03ಎಕರೆ–05 ಗುಂಟೆ **ಒಟ್ಟು 22 ಎಕರೆ 37ಗುಂಟೆ** ವಿಸ್ತೀರ್ಣದ ಪ್ರದೇಶಗಳಿಗೆ **ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಯಲ್ಲಿನ ಭೂ ಉಪಯೋಗ ವಿಶ್ಲೇಷಣೆ ಹಾಗೂ ವಿವಿಧ ಅಳತೆಯ ನಿವೇಶನಗಳ ವಿವರಗಳು ಈ ಕೆಳಕಂಡಂತಿದೆ.**

ಕ್ರ.ಸಂ.	ಭೂ ಉಪಯೋಗ ವಿಶ್ಲೇಷಣೆ	ವಿಸ್ತೀರ್ಣ (ಚ.ಮೀ.ಗಳಲ್ಲಿ)	ಶೇಕಡವಾರು (%)
1	ವಸತಿ	50,295.18	54.21
2	ಉದ್ಯಾನವನ	9652.30	10.40
3.	Public Utilities	357.30	0.39
4	ನಾಗರೀಕ ಸೌಕರ್ಯ ನಿವೇಶನ	4,645.30	5.01
5	ರಸ್ತೆ	27,823.67	29.99
	ಒಟ್ಟು	**92,773.81**	**100.00**

ಕ್ರ.ಸಂ.	ನಿವೇಶನಗಳ ವಿವರ (ಮೀ.ಗಳಲ್ಲಿ)	ಒಟ್ಟು
1	**9.14 X 15.24**	125
2	**9.14 X 12.19**	101
3	**9.14 X** ODD	62
4.	ODD (O)	74
	ಒಟ್ಟು	**362**

ಮೇಲೆ ವಿವರಿಸುವಂತೆ **ಒಟ್ಟು 362** ನಿವೇಶನಗಳನ್ನು ಅಳವಡಿಸಿ, ಪ್ರಸ್ತಾಪಿತ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳಾದ ನಾಲಗಳು, ಒಳಚರಂಡಿ, ರಸ್ತೆ, ಮೋರಿ ನಿರ್ಮಾಣ, ವಿದ್ಯುತ್ ಸರಬರಾಜು ವ್ಯವಸ್ಥೆ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಸಂಬಂಧಪಟ್ಟ ಇಲಾಖಾ ನಿಯಮಾವಳಿಗನುಗಣವಾಗಿ ಅಭಿವೃದ್ಧಿಪಡಿಸಲು ಹಾಗೂ ರಸ್ತೆ ಪಂಕ್ತೀಕರಣಗೊಳಿಸಿ, ಉದ್ಯಾನವನ, ನಾಗರೀಕ ಸೌಲಭ್ಯ ಪ್ರದೇಶಗಳನ್ನು ಗುರುತಿಸಿ ಸೂಕ್ತ ಫೆನ್ಸಿಂಗ್ ನೊಂದಿಗೆ ಸಂರಕ್ಷಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2–ಎ) ರಡಿಯಲ್ಲಿ

ಯಾವುದೇ ನಿವೇಶನಗಳನ್ನು ಮಾರಾಟ ಮಾಡಲು ಬಿಡುಗಡೆಗೊಳಿಸದೇ ಕೇವಲ ವಿನ್ಯಾಸವನ್ನು ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ("Demarcation & Development" purpose only) ಈ ಕೆಳಕಂಡ ಷರತ್ತಿಗೊಳಪಟ್ಟು ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಯ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಕ್ರ.ಸಂ.	ಷರತ್ತುಗಳು
1.	ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ ವಿನ್ಯಾಸ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ಈ ವಸತಿ ವಿನ್ಯಾಸ ನಕ್ಷೆಯಲ್ಲಿನ ಯಾವುದೇ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಿರುವುದಿಲ್ಲ. ಹಾಗಾಗಿ, ವಿನ್ಯಾಸದಲ್ಲಿನ ನಿವೇಶನಗಳನ್ನು ಮಾರಾಟ ಅಥವಾ ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ನಿವೇಶನಗಳಲ್ಲಿರುವ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದಲ್ಲ ಅಥವಾ ನೀಡತಕ್ಕದ್ದಲ್ಲ.
2.	**ಅರ್ಜಿದಾರರು ಒಂದು ವೇಳೆ ಶೇ 40 ರಷ್ಟು ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲು ಕೋರಿದಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17(2)(ಸಿ) ರಡಿಯಲ್ಲಿ Demarcation ನಕ್ಷೆಯಂತೆ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆ ಪ್ರದೇಶವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ನಿವೇಶನವನ್ನು ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಪುಕ್ಕಟ್ಟೆಯಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಂಡು, ವಿನ್ಯಾಸದಲ್ಲಿನ ಮೂಲೆ ನಿವೇಶನಗಳನ್ನು ನೋಂದಾಯಿತ Mortgage ಪತ್ರದ ಮೂಲಕ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ Mortgage ಪತ್ರ ಪಡೆದುಕೊಂಡ ನಂತರ ಮೊದಲನೇ ಹಂತದ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಷರತ್ತಿಗೊಳಪಟ್ಟಿದೆ ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಮಂಡಳಿ ರವರಿಂದ ನೋಂದಣಿ ಮಾಡಿಕೊಂಡು ನೋಂದಣಿ ಪ್ರತಿಯನ್ನು ಸಲ್ಲಿಸಲು ಸೂಚಿಸಲಾಗಿದೆ.**
3.	ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ **ಮೂರು ವರ್ಷಗಳವರೆಗೆ** ಮಾತ್ರ ಜಾರಿಯಲ್ಲಿರುತ್ತದೆ.
4.	ಪ್ರಸ್ತಾವಿತ ಜಾಗವು TGR ನ ವಲಯ–01 ರಲ್ಲಿ ಇರುತ್ತದೆ. ಹಾಗಾಗಿ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಸಂರಕ್ಷಣೆಗಾಗಿ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಸಂಖ್ಯೆ.ಅಪಜೀ/177/ಇಎನ್‌ಜಿ/2024 ದಿನಾಂಕ:02–01–2026 ರಲ್ಲಿನ ನಿರ್ದೇಶನಗಳನ್ನು ಪಾಲಿಸುವ ಷರತ್ತಿಗೊಳಪಟ್ಟಿರುತ್ತದೆ.
5.	**ಈ ವಿನ್ಯಾಸದಲ್ಲಿ ಇರುವಂತಹ 'ಬಿ' ಖರಾಬು ಜಾಗಗಳು ಸರ್ಕಾರಕ್ಕೆ ಸೇರಿದವುಗಳಾಗಿದ್ದು ಈ ಜಾಗಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಇವುಗಳನ್ನು ಅತಿಕ್ರಮಣ ಮಾಡತಕ್ಕದ್ದಲ್ಲ. ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಅರ್ಜಿ ಸಂಖ್ಯೆ:** 820492, 820494 ಮತ್ತು 820495 ದಿನಾಂಕ:02–02–2026 ರಂತೆ **ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆದೇಶ ಹೊರಡಿಸಲಾಗಿದ್ದು, ಸದರಿ ಅದೇಶದಲ್ಲಿನ ನಿಬಂಧನೆಗಳನ್ನು ಪಾಲಿಸತಕ್ಕದ್ದು.**
6.	ವಿನ್ಯಾಸದಲ್ಲಿನ ಸಿವಿಲ್ ಕಾಮಗಾರಿಗಳಾದ ಡಾಂಬರೀಕೃತ ರಸ್ತೆ. ಚರಂಡಿ (ಮಳೆನೀರು) ಕಲವರ್ಟ್ ಇತ್ಯಾದಿಗಳನ್ನು **ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪ ವಿಭಾಗ ರವರ Specification** ಅನುಗುಣವಾಗಿ ಅಭಿವೃದ್ಧಿ ಪಡಿಸಿ,

	ಕಾಮಗಾರಿ ಪೂರ್ಣಗೊಂಡ ನಂತರ ಸದರಿ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.
7.	**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಲೆಕ್ಟ್ರಿಕ್) ಬೆಸ್ಕಾಂ ರವರ Specification ಅನುಗುಣವಾಗಿ ವಿದ್ಯುತ್ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಿ, ಕಾಮಗಾರಿ ಪೂರ್ಣಗೊಂಡ ನಂತರ ವಿನ್ಯಾಸದಲ್ಲಿ ವಿದ್ಯುತ್ ಚಾಲನೆಯಲ್ಲಿರುವ ಬಗ್ಗೆ ಸರ್ವೀಸ್ ಸರ್ಟಿಫಿಕೇಟ್‌ನ್ನು ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.**
8.	**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ರವರ Specification ಅನುಗುಣವಾಗಿ ವಿನ್ಯಾಸದಲ್ಲಿನ ಉದ್ಯಾನವನವನ್ನು ಅಭಿವೃದ್ಧಿ ಪಡಿಸಿರುವ ಬಗ್ಗೆ ಹಾಗೂ ಗಿಡಮರಗಳನ್ನು ನಿಗದಿತ ಸ್ಥಳಗಳಲ್ಲಿ ನೆಟ್ಟಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.**
9.	**ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ** ಸದರಿ ಬಡಾವಣೆಯಲ್ಲಿ ಕ್ರಮ ಕೈಗೊಳ್ಳಬೇಕಾಗಿರುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ ಅನುಮತಿ ಪಡದು ಅದರಂತೆ, ನೀರು ಸರಬರಾಜು ಮತ್ತು ಒಳಚರಂಡಿಯ ಕಾಮಗಾರಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ Specification ಅನುಗುಣವಾಗಿ **ನಿಯಮಾನುಸಾರ ತೃಪ್ತಿಕರವಾಗಿ ಪೂರ್ಣಗೊಳಿಸಿ ನಿರಾಕ್ಷೇಪಣಾ ಪತ್ರ ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.**
10.	ವಿನ್ಯಾಸದ ಎಲ್ಲಾ ಸಿವಿಲ್ ಅಭಿವೃದ್ಧಿ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವ ಪೂರ್ವದಲ್ಲಿ **ಗ್ರಾಮ ಪಂಚಾಯಿತಿ** ಗಮನಕ್ಕೆ ತಂದು ಅವರ ಮಾರ್ಗದರ್ಶನದಂತೆ ಅಭಿವೃದ್ಧಿ ಪಡಿಸಿ ವಿನ್ಯಾಸದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ ತರುವಾಯ ಸ್ಥಳೀಯ ನಗರಸಭೆ / ಗ್ರಾಮ ಪಂಚಾಯಿತಿ ರವರಿಂದ ವಿನ್ಯಾಸವು ತೃಪ್ತಿಕರವಾಗಿ ಅಭಿವೃದ್ಧಿಗೊಂಡಿರುವ ಬಗ್ಗೆ ನಿರಾಕ್ಷೇಪಣಾ ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
11.	ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ "ಸದರಿ ವಸತಿ ವಿನ್ಯಾಸ / ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ನಿಯಮಗಳನ್ವಯ ಕ್ರಮ ಜರುಗಿಸತಕ್ಕದ್ದು."
12.	ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಪ್ರಕಟಣೆ ಸಂಖ್ಯೆ:ಸಂವ್ಯಶಾಇ/24/ಶಾಸನ/2015, ಬೆಂಗಳೂರು, ದಿನಾಂಕ:10–09–2015 ಮತ್ತು 05–07–2021 ರಲ್ಲಿ ತಿದ್ದುಪಡಿ ತಂದಿರುವ ಕಾಯ್ದೆಗೆ ಅನುಗುಣವಾಗಿ ವಿನ್ಯಾಸವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮಾತ್ರ ಈ ವಿನ್ಯಾಸವನ್ನು ಅನುಮೋದಿಸಲಾಗಿದ್ದು, ಯಾವುದೇ ನಿವೇಶನಗಳನ್ನು ಮಾರಾಟ ಮಾಡಲು, ಖಾತಾ ಮಾಡಲು ಅಥವಾ ಭೋಗ್ಯ/ಇತರೆ ಅಡಮಾನಗಳಿಗೆ ಅವಕಾಶವಿರುವುದಿಲ್ಲ.
13.	ಈ ವಸತಿ ವಿನ್ಯಾಸ ನಕ್ಷೆಯಲ್ಲಿರುವಂತೆಯೇ ನಿವೇಶನಗಳು, ರಸ್ತೆಗಳು ಮತ್ತು ಉದ್ಯಾನವನಕ್ಕಾಗಿ ಕಾಯ್ದಿರಿಸಿ ಪ್ರದೇಶಗಳನ್ನು ಸ್ಥಳದಲ್ಲಿ ಯಥಾವತ್ತಾಗಿ ಅಳವಡಿಸುವುದು. ಉದ್ಯಾನವನಕ್ಕಾಗಿ ಕಾಯ್ದಿರಿಸಿದ ಪ್ರದೇಶದ ಸುತ್ತಲೂ Chain Link Fencing / Grill and basement Wall type Boundary protection, Walking Path, Sitting Benches and other related fecilities ಗಳನ್ನು ಅಳವಡಿಸುವುದು ಮತ್ತು ಉದ್ಯಾನವನ ಜಾಗದಲ್ಲಿ **"ಸಾರ್ವಜನಿಕ ಉದ್ಯಾನವನ"** ಎಂದು ಸಾರ್ವಜನಿಕರಿಗೆ ಕಾಣುವ ರೀತಿ ನಾಮ ಪಲಕವನ್ನು ಅಳವಡಿಸುವುದು ಮತ್ತು ಈ ನಾಮಪಲಕದಲ್ಲಿ ಉದ್ಯಾನವನದ ಸಂಖ್ಯೆ ಮತ್ತು ವಿಸ್ತೀರ್ಣವನ್ನು ನಮೂದಿಸತಕ್ಕದ್ದು. ಬಡಾವಣೆಯಲ್ಲಿ ಡಾಂಬರೀಕೃತ ರಸ್ತೆ, ಮಳೆ ನೀರಿನ ಚರಂಡಿ, ಕಲ್ವರ್ಟ್ಸ್, ಒಳಚರಂಡಿ ವ್ಯವಸ್ಥೆ,

	ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸಂಪರ್ಕ ವ್ಯವಸ್ಥೆಗಳನ್ನು ಕಲ್ಪಿಸತಕ್ಕದ್ದು ಹಾಗೂ ವಿನ್ಯಾಸದಲ್ಲಿ ಗುರುತಿಸಲಾಗಿರುವ ಸ್ಥಳದಲ್ಲಿಯೇ ಪ್ರಮಾಣೀಕೃತ ರೀತಿಯಲ್ಲಿ Septic Tank / Soak Pit ಅನ್ನು ನಿರ್ಮಿಸುವುದು ಮತ್ತು ಉದ್ಯಾನವನದ ಸುತ್ತಲು ಮತ್ತು ರಸ್ತೆಯ ಎರಡೂ ಬದಿಗಳಲ್ಲೂ ಸ್ಥಳೀಯ ಮರಗಳು ಮತ್ತು ಹಣ್ಣಿನ ಮರಗಳನ್ನು ನೆಟ್ಟು ಮೂರು ವರ್ಷದ ವರೆಗೆ ಮಾಲೀಕರೇ ನಿರ್ವಹಣೆ ಮಾಡತಕ್ಕದ್ದು,
14.	ವಿನ್ಯಾಸ ನಕ್ಷೆಯಲ್ಲಿರುವಂತೆಯೇ ಸಿ.ಎ.ನಿವೇಶನಕ್ಕಾಗಿ ಕಾಯ್ದಿರಿಸಿ ಪ್ರದೇಶಗಳನ್ನು ಸ್ಥಳದಲ್ಲಿ ಯಥಾವತ್ತಾಗಿ ಅಳವಡಿಸುವುದು. ಸಿ.ಎ.ನಿವೇಶನಕ್ಕಾಗಿ ಕಾಯ್ದಿರಿಸಿದ ಪ್ರದೇಶದ ಸುತ್ತಲೂ Chain Link Fencing / Grill and basement Wall type Boundary protection ಮಾಡುವುದು, ಸಿ.ಎ. ನಿವೇಶದ ಸುತ್ತಲು ಸ್ಥಳೀಯ ಮರಗಳು ಮತ್ತು ಹಣ್ಣಿನ ಮರಗಳನ್ನು ನೆಟ್ಟು ಮೂರು ವರ್ಷದ ವರೆಗೆ ಮಾಲೀಕರೇ ನಿರ್ವಹಣೆಮಾಡತಕ್ಕದ್ದು ಮತ್ತು ಸಿ.ಎ. ನಿವೇಶನದ ಜಾಗದಲ್ಲಿ **"ಸಿ.ಎ. ಪ್ರದೇಶವು ನೆಲಮಂಗಲ ಯೋಜನಾ ಪ್ರಾಧಿಕಾರದ ಸ್ವತ್ತು"** ಎಂದು ನಾಮ ಪಲಕವನ್ನು ಅಳವಡಿಸುವುದು ಮತ್ತು ಈ ನಾಮಪಲಕದಲ್ಲಿ ಸಿ.ಎ. ನಿವೇಶನದ ಸಂಖ್ಯೆ, ವಿಸ್ತೀರ್ಣಗಳನ್ನು ನಮೂದಿಸತಕ್ಕದ್ದು ಹಾಗೂ ಈ ನಾಮಪಲಕವು ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸುವುದು.
15.	ಸದರಿ ವಿನ್ಯಾಸದಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ತೆರೆದ ಚರಂಡಿಗಳನ್ನು ನಿರ್ಮಿಸಿ, ಚರಂಡಿಗಳಲ್ಲಿ ಹುಳು ಸಂಗ್ರಹವಾಗದಂತೆ ಹಾಗೂ ನೀರು ಸರಾಗವಾಗಿ ಹರಿಯುವಂತೆ ಕ್ರಮವಹಿಸುವುದು.
16.	ರಾಜಕಾಲುವೆಗಳನ್ನು ಮುಚ್ಚದಂತೆ ಕ್ರಮವಹಿಸಿ, ರಾಜಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನೀತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ನೋಡಿಕೊಳ್ಳತಕ್ಕದ್ದು, ಮತ್ತು ರಾಜಕಾಲುವೆಗಳನ್ನು ಅತಿಕ್ರಮಣ / ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯುವಂತೆ ಕ್ರಮವಹಿಸತಕ್ಕದ್ದು.
17.	ವಿನ್ಯಾಸ ನಕ್ಷೆಯಲ್ಲಿ ಗುರುತಿಸಿರುವ ನಾಲಾ, ಹಳ್ಳ ಮತ್ತು ಇತ್ಯಾದಿ ಜಾಗಗಳಿಗೆ ಸ್ಟೋನ್ ಪಿಚ್ಚಿಂಗ್ ಕಾಮಗಾರಿ ಮಾಡುವುದು.
18.	ಸದರಿ ಬಡಾವಣೆಯನ್ನು ಸಂಪೂರ್ಣವಾಗಿ ಅಭವೃದ್ಧಿಪಡಿಸಿ ವಿನ್ಯಾಸಕ್ಕೆ ಅಂತಿಮ ಅನುಮೋದನೆಯನ್ನು ಪಡೆಯುವ ಸಂಬಂಧ ಸದರಿ ವಿನ್ಯಾಸದಲ್ಲಿ ಕಾಯ್ದಿರಿಸಿರುವ ರಸ್ತೆಗಳು ಹಾಗೂ ಉದ್ಯಾನವನಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲು ಕ್ರಮ ಜರುಗಿಸತಕ್ಕದ್ದು ಹಾಗೂ ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಪ್ರಮಾಣ ಪತ್ರಗಳೊಂದಿಗೆ ಅಂತಿಮ ಅನುಮೊದನೆಗೆ ಮನವಿ ಸಲ್ಲಿಸಿದ ನಂತರ ಪರಿಶೀಲಿಸಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ವಿನ್ಯಾಸದ ಶೇಕಡ 100 ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗುವುದು.
19.	ಈ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಈ ವಸತಿ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಟ ಬಳಕೆಗೆ ಮಾತ್ರ ಉಪಯೋಗಿಸತಕ್ಕದ್ದು.

20.	ಈ ಅನುಮೋದಿತ ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.
21.	ಈ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟ್ ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಈ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆಗಳು, ಸಾರ್ವಜನಿಕ ರಸ್ತೆಗಳಾಗಿದ್ದು, ಇವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮಾತ್ರ ಇರಿಸತಕ್ಕದ್ದು, ಈ ರಸ್ತೆಗಳಿಗೆ ಅಡ್ಡಲಾಗಿ ತಡೆಗೋಡೆಯನ್ನು ನಿರ್ಮಿಸತಕ್ಕದ್ದಲ್ಲ ಹಾಗೂ ಈ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
22.	ಈ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳು ಸಾರ್ವಜನಿಕ ಸ್ವತ್ತಾಗಿರುತ್ತವೆ. ಆದ್ದರಿಂದ, ಈ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.
23.	ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಲುವಾಗಿ ಉಪಯೋಗಿಸಲು ಬರುವುದಿಲ್ಲ ಹಾಗೂ ಈ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಹೊಣೆಯಾಗುವುದಿಲ್ಲ.
24.	ಪ್ರಸ್ತಾವಿತ ಜಮೀನುಗಳು ಯಾವುದೇ ಭೂ ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ, ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
25.	ಒಂದು ವೇಳೆ ಸರ್ಕಾರವು ಪೂರ್ವಾನ್ವಯವಾಗುವಂತೆ ನಿಗದಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
26.	ಅನುಮೋದಿತ ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸುವಾಗ ಮಳೆ ನೀರು ಸಂಗ್ರಹಣಾ ಪದ್ಧತಿ ಹಾಗೂ Solar Water Heater ಅನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲಾಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
27.	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ರವರ ಪತ್ರ ಸಂಖ್ಯೆ:PCB:WMC:2096:2018-19:125 ರನ್ವಯ STORM WATER DRAIN ಗಳಲ್ಲಿ ಒಳಹರಿವಿಗಾಗಿ ಹಾಗೂ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ Storm water drain ಗಳನ್ನು ಮುಚ್ಚದೆ ಇರುವಂತೆ ಮತ್ತು ಕಾಲಕಾಲಕ್ಕೆ Desilt ಮಾಡತಕ್ಕದ್ದು.
28.	ಸರ್ಕಾರದ ಸುತ್ತೋಲೆ ಸಂಖ್ಯೆ:ನಇ 2009 ಬಿಎಂಅರ್ 2016, ದಿನಾಂಕ:31–03–2017 ರ ರೀತ್ಯಾ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.
29.	ಈ ವಿನ್ಯಾಸ ನಕ್ಷೆಯು ಅನುಮೋದನೆಯ ಸಲುವಾಗಿ ಸಲ್ಲಿಸಲಾಗಿರುವ ಭೂ ಮಾಲೀಕತ್ವದ ದಾಖಲೆಗಳು. ಸರ್ವೆಸ್ಕೆಚ್ ಮತ್ತು ಇತರೆ ಯಾವುದೇ ದಾಖಲಾತಿಗಳು / ಮಾಹಿತಿಗಳು ತಪ್ಪು / ಸುಳ್ಳು / ಪೋರ್ಜರಿಯಾಗಿದ್ದಲ್ಲಿ ಅಥವಾ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ.

	ವಿನ್ಯಾಸಕ್ಕೆ ನೀಡಿರುವ ಅಂಗೀಕಾರವು ಯಾವುದೇ ಪೂರ್ವ ಸೂಚನೆ ಇಲ್ಲದೇ ಈ ವಿನ್ಯಾಸ ನಕ್ಷೆಯನ್ನು ರದ್ದು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ.
30.	**ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಕರ್ನಾಟಕ ರಾಜ್ಯ ತಿದ್ದುಪಡಿ ಅಧಿಸೂಚನೆ ಸಂಖ್ಯೆ:FEE:205:EPC:2018, ದಿನಾಂಕ:09–09–2020 ರನ್ವಯ CFE ಪಡೆಯುವ ಹಾಗೂ ವಿನ್ಯಾಸದಲ್ಲಿ ನಿಗಧಿತ ಸಾಮರ್ಥ್ಯದ (STP) ಯನ್ನು ನಿರ್ಮಿಸತಕ್ಕದ್ದು.**

ಸಹಿ/–
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಇವರಿಗೆ,

ಶ್ರೀಮತಿ.ಪ್ರಭಾಮಣಿ ಪರವಾಗಿ ಮತ್ತು ಇತರರ ಪರವಾಗಿ
ಜೆಪಿಎದಾರರಾದ ಶ್ರೀ.ದೀಪಕ್ ಚಿದಂಬರ ಬೆಟಗೇರಿ, ನಿರ್ದೇಶಕರು
ಮೆ//ಇಂಡಿಯಾ ವ್ಯಾಲಿ ಪ್ರಾಪರ್ಟೀಸ್ ಪೈವೇಟ್ ಲಿಮಿಟೆಡ್
ನಂ.6/ಎ,2ನೇ ಮಹಡಿ, ಕ್ರಾಸ್ ಎಕ್ಸೆಲ್ಸ್, 3ನೇ ಮುಖ್ಯ ರಸ್ತೆ,
ಕೋರಮಂಗಲ, ಬೆಂಗಳೂರು.

ಪ್ರತಿಯನ್ನು:

1. **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸೋಲದೇವನಹಳ್ಳಿ ಗ್ರಾಮ ಪಂಚಾಯಿತಿ ನೆಲಮಂಗಲ ತಾಲ್ಲೂಕು,** ಇವರಿಗೆ ವಿನ್ಯಾಸದಲ್ಲಿನ ಕಾಮಗಾರಿಗಳನ್ನು Specification ಗೆ ಅನುಗುಣವಾಗಿ ಅಭಿವೃದ್ಧಿ ಪಡಿಸಿರುವ ಬಗ್ಗೆ ಮೇಲ್ವಿಚಾರಣೆ ಮಾಡಿ, ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಿದ ನಂತರ ತೃಪ್ತಿಕರವಾಗಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ನೀಡಲು ಕೋರಲಾಗಿದೆ.
2. **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಲೆಕ್ಟ್ರಿಕ್) ಬೆಸ್ಕಾಂ, ನೆಲಮಂಗಲ ತಾಲ್ಲೂಕು,** ಇವರಿಗೆ ಅಂದಾಜು ಪಟ್ಟಿ ತಯಾರಿಸಲು ಹಾಗೂ ತಮ್ಮ ನಿರ್ದೇಶನದಂತೆ ಕಾಮಗಾರಿಗಳನ್ನು ನಿರ್ವಹಿಸಲು ವಿನ್ಯಾಸದಾರರಿಗೆ ಸೂಚಿಸಿ, ಮೇಲ್ವಿಚಾರಣೆ ಮಾಡಿ ಕಾಮಗಾರಿಗಳು ಪೂರ್ಣಗೊಂಡ ನಂತರ **ವಿದ್ಯುತ್ ಚಾಲನೆಯಲ್ಲಿರುವ ಬಗ್ಗೆ ಸರ್ವೀಸ್ ಸರ್ಟಿಫಿಕೇಟ್‌ನ್ನು** ನೀಡಲು ಕೋರಲಾಗಿದೆ.
3. **ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ನೆಲಮಂಗಲ ತಾಲ್ಲೂಕು,** ಇವರಿಗೆ ಅಂದಾಜು ಪಟ್ಟಿ ತಯಾರಿಸಲು ಹಾಗೂ ತಮ್ಮ ನಿರ್ದೇಶನದಂತೆ ಕಾಮಗಾರಿ ನಿರ್ವಹಿಸಲು ವಿನ್ಯಾಸದಾರರಿಗೆ ಸೂಚಿಸಿ, ಕಾಮಗಾರಿಗಳ ಮೇಲ್ವಿಚಾರಣೆ ಮಾಡಿ ನಿರಾಕ್ಷೇಪಣಾ ಪತ್ರ ನೀಡಲು ಕೋರಲಾಗಿದೆ.
4. **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ನೆಲಮಂಗಲ ತಾಲ್ಲೂಕು,** ಇವರಿಗೆ ಅಂದಾಜು ಪಟ್ಟಿ ತಯಾರಿಸಲು ಹಾಗೂ ತಮ್ಮ ನಿರ್ದೇಶನದಂತೆ ಕಾಮಗಾರಿ ನಿರ್ವಹಿಸಲು ವಿನ್ಯಾಸದಾರರಿಗೆ ಸೂಚಿಸಿ, ಕಾಮಗಾರಿಗಳ ಮೇಲ್ವಿಚಾರಣೆ ಮಾಡಿ ನಿರಾಕ್ಷೇಪಣಾ ಪತ್ರ ನೀಡಲು ಕೋರಲಾಗಿದೆ.

5. **ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪ ವಿಭಾಗ, ನೆಲಮಂಗಲ ತಾಲ್ಲೂಕು,** ಇವರಿಗೆ ಅಂದಾಜು ಪಟ್ಟಿ ತಯಾರಿಸಲು ಹಾಗೂ ತಮ್ಮ ನಿರ್ದೇಶನದಂತೆ ಕಾಮಗಾರಿ ನಿರ್ವಹಿಸಲು ವಿನ್ಯಾಸದಾರರಿಗೆ ಸೂಚಿಸಿ, ಕಾಮಗಾರಿಗಳ ಮೇಲ್ವಿಚಾರಣೆ ಮಾಡಿ ನಿರಾಕ್ಷೇಪಣಾ ಪತ್ರ ನೀಡಲು ಕೋರಲಾಗಿದೆ.
6. ಪ್ರಸ್ತಾವಿತ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಭೌತಿಕವಾಗಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮುನ್ನ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಕರ್ನಾಟಕ ರಾಜ್ಯ ತಿದ್ದುಪಡಿ ಅಧಿಸೂಚನೆ ಸಂಖ್ಯೆ:FEE:205:EPC:2018, ದಿನಾಂಕ:09–09–2020 ರನ್ವಯ CFE ಪಡೆಯುವ ಹಾಗೂ ವಿನ್ಯಾಸದಲ್ಲಿ ನಿಗಧಿತ ಸಾಮರ್ಥ್ಯದ (STP) ಸ್ಥಾಪಿಸಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ನೀಡಲು ಕೋರಲಾಗಿದೆ.
7. ಕಛೇರಿ ಪ್ರತಿ.

28-7-26

ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.